ಕಳಿಸುವವರೆಗೆ ಥೇಟ್ ಅಮ್ಮನಂತೆಯೇ ವಿಚಾರಣೆ.

‘ಎಲ್ಲಾ ಬುಕ್ಸ್ ತೆಗೆದಿಟ್ಟುಕೊಂಡಿದೀಯಾ? ನೀರಿನ ಬಾಟ್ಲಿ, ಟಿಫನ್ ಬಾಕ್ಸು...’

ಅವನಾದರೂ ಅಕ್ಕನಂತೆಯೇ ವಯಸ್ಸಿಗೆ ಮೀರಿ ದೊಡ್ಡವನಾಗಿಬಿಟ್ಟನೇ? ಬೆಳಿಗ್ಗೆ ಹತ್ತು ಸಲ ಕರೆದ ನಂತರ ಆಕಳಿಸುತ್ತಾ ಎದ್ದು ಕೂರುತ್ತಿದ್ದವನು ಅಕ್ಕನ ಅಥವಾ ಅಪ್ಪನ ಒಂದೇ ಕರೆಗೆ ಹಾಸಿಗೆ ಬಿಟ್ಟು ಎದ್ದೇಳುತ್ತಾನೆ. ‘ಬೇಗ್ ಬೇಗ ತಿಂಡಿ ತಿನ್ನೋ. ವ್ಯಾನು ಬಂದುಬಿಡುತ್ತೆ’ ಎಂದು ಹೇಳಿಸಿಕೊಳ್ಳದೆ, ಅದು ಬೇಡ, ಇದು ಬೇಡ ಎಂದು ರಾಗ ತೆಗೆಯದೆ, ಕೊಟ್ಟಿದ್ದು ತಿಂದು, ಹಾಲು ಕುಡಿದು ‘ಪಾಪ, ಪಾಪ, ಪಾಪ’ ಎಂದು ಅದೆಷ್ಟು ಸಲ ಅಂದುಕೊಳ್ಳುತ್ತಿದ್ದಳೋ ಈ ಅಕ್ಕ? ಅವಳು ಮಾತ್ರ ಪಾಪ ಅಲ್ಲವಾ? ಆದರೆ ತನಗಿಂತ ಹೆಚ್ಚು ತಮ್ಮನಾದವನ ಮೇಲೆ ಅನುಕಂಪ. ಇಮ್ಮಡಿಯೋ, ಮುಮ್ಮಡಿಯೋ ಆಗಿರುವಂತಾ ಪ್ರೀತಿ. ತನ್ನ ಮತ್ತೊಂದು ಜೀವದಂತಾಗಿರುವ ತಮ್ಮನಿಗೆ ಯಾರಾದರೂ, ಏನಾದರೂ ಕಟುಮಾತು ಆಡಬಹುದೆಂಬ ಕಲ್ಪನೆಯೇ ಭಾಮನನ್ನು ಎದೆಗುಂದಿಸಿಬಿಟ್ಟಿತ್ತು. ಯಾಕಾದರೂ ಈ ಸೋದರಮಾವ ಮನೆಗೆ ಬಂದನೋ? ಇದ್ದಿದ್ದರಲ್ಲಿ ನೆಮ್ಮದಿ ಹುಡುಕಿಕೊಳ್ಳುವ ಪ್ರಯತ್ನದಲ್ಲಿದ್ದವರನ್ನು ಕಂಗೆಟ್ಟು ಹೋಗುವಂತೆ ಮಾಡಿದನೋ? ಅಪ್ಪನಿಗೆ ಈ ಪ್ರಸ್ತಾಪದಿಂದ ಖುಷಿಯಾಗಿದೆಯಾ? ಹೊಸ ಹೆಂಡತಿ ಸಿಕ್ಕುತ್ತಾಳೆಂಬ ಸಂಭ್ರಮ? ಹೂಂ ಅನ್ನುವ ಒಂದು ಸಂಜ್ಞೆ ಅವನ ಬಾಯಿಂದ ಹೊರ ಬಿದ್ದರೆ ಸಾಕು, ಮತ್ತೆ ಈ ಮನೆಗೊಬ್ಬ ಹೊಸ ಅಮ್ಮ ಬರುವುದಕ್ಕೆ ಯಾವುದೇ ತಡೆಯಿಲ್ಲ. ಭವಿಷ್ಯದ ಕಷ್ಟ, ಸುಖದ ಕುರಿತು ಯಾವುದೇ ಅರಿವಿಲ್ಲದ, ಆ ಕುರಿತು ಯೋಚನೆ ಮಾಡುವಷ್ಟು ಬುದ್ಧಿ ಬೆಳೆದಿರದ ಭಾರ್ಗವ ಅವತ್ತು ಸೋದರಮಾವ ಆಡುತ್ತಿದ್ದ ಮಾತುಗಳನ್ನು ಕೇಳಿಸಿಕೊಳ್ಳುವುದಕ್ಕಿಂತ ಅವನು ತಂದ ತಿಂಡಿ ಮುಕ್ಕುವುದರಲ್ಲಿ ಹೆಚ್ಚು ಮಗ್ನನಾಗಿದ್ದ. ಹಾಗೆಂದು ಭಾಮನ ಊಹೆ. ಆದರೆ ಭಾಮ ಮಾತ್ರ ಎಲ್ಲವನ್ನೂ ಕೇಳಿಸಿಕೊಂಡಿದ್ದಲ್ಲದೆ ಅರ್ಥೈಸಿಕೊಂಡಿದ್ದಳು ಕೂಡಾ. ತಿನ್ನುತ್ತಿದ್ದ ಮೈಸೂರುಪಾಕು ಕಹಿಯಾಗಿತ್ತು. ಮತ್ತೆ ಅವಳು ತಿಂಡಿಗೆ ಕೈ ಹಾಕಿರಲಿಲ್ಲ.

‘ಯಾಕೇ? ತಿನ್ನೇ’ ಅಂದಿದ್ದ ಭಾರ್ಗವ. ತಲೆ ಅಲುಗಿಸಿ ಎದ್ದು ಹೋದವಳು ಕೋಣೆ ಸೇರಿಕೊಂಡು, ಮುಸುಕು ಬೀರಿಕೊಂಡು, ಒಳಗಿನಿಂದ ಒದ್ದುಕೊಂಡು ಬರುತ್ತಿದೆ ಅಳು. ಇನ್ನೇನು ತಮ್ಮ ಮಲಗಲು ಬರುತ್ತಾನೆ. ಅವನಿಗೆ ಗೊತ್ತಾದರೆ ಯಾಕೆ ಅಳ್ತಿದೀಯಾ? ಎನ್ನುತ್ತಾ ಅವನೂ ಅಳತೊಡಗಿ,

ಭಾಮ ತನ್ನನ್ನು ತಾನು ಸಂತೈಸಿಕೊಳ್ಳುವ ಪ್ರಯತ್ನ ಮಾಡಿದ್ದಳು. ಮಲತಾಯಿ ಅಂದರೆ ಕೆಟ್ಟವಳೇ ಆಗಿರುತ್ತಾಳೆ ಎಂದು ಯಾಕೆ ಅಂದುಕೊಳ್ಳಬೇಕು? ಕತೆ ಪುಸ್ತಕಗಳಲ್ಲಿ ಓದಿ, ಅಮ್ಮ ಹೇಳುತ್ತಿದ್ದ ಕತೆಗಳನ್ನು ಕೇಳಿ, ಹೀಗೊಂದು ಹುಳು ತಲೆ ಹೊಕ್ಕು ಕೂತುಬಿಟ್ಟಿದೆ. ಅಮ್ಮನಂತೆಯೇ ತಮ್ಮನ್ನು ಪ್ರೀತಿಸಬಹುದಾದ ಮತ್ತೊಬ್ಬ ಅಮ್ಮ, ತಲೆ ಬಾಚಿ ಜಡೆ ಹಾಕಿ, ಯೂನಿಫಾರಂಗೆ ಇಸ್ತ್ರಿ ಮಾಡಿಕೊಟ್ಟು, ಎಲ್ಲಕ್ಕಿಂತ ಮಿಗಿಲಾಗಿ ಸ್ಕೂಲಿನಿಂದ ವಾಪಸು ಬರುವ ಹೊತ್ತಿಗೆ ಗೇಟಿನ ಬಳಿಯೇ ಕಾದು ನಿಂತಿರುವ ಅಮ್ಮ. ಅವಳ ಮುಖ ನೋಡುತ್ತಿದ್ದಂತೆ ಮೈದುಂಬಿಕೊಳ್ಳುವ ಉತ್ಸಾಹ. ಅಮ್ಮ ಅಮ್ಮ ಅಮ್ಮಾ ಅರೇ, ಮಲತಾಯಿ ಕೂಡಾ ಹೀಗಿರಬಹುದೆನ್ನುವ ಕಲ್ಪನೆಯಲ್ಲಿ ಸಮಾಧಾನ ಕಂಡುಕೊಳ್ಳುತ್ತಿದ್ದವಳು ಇನ್ನೆಂದೂ ಸಿಕ್ಕದ ಅಮ್ಮನ ಕುರಿತು ಕನವರಿಸುತ್ತಾ ಬಿಕ್ಕುತ್ತಿದ್ದೇನೆಯೇ?

